


ಅರ್ಪಣ

'ಸ್ವಧರ್ಮ' ಆರಂಭವಾದದ್ದು 1926ರಲ್ಲಿ. ಅದಿರಲಿ, ಕಣವಿಯವರು ತಮ್ಮ ಲೇಖನದಲ್ಲಿ 'ಈ ಕವಿತೆ ಪ್ರಕಟವಾದಾಗ ಹೊಸ ಕವಿತೆಯನ್ನು ಜನ ಹೇಗೆ ಸ್ವೀಕರಿಸುತ್ತಾರೋ ಎಂಬ ಸಂಶಯದಿಂದ 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದ ಬದಲು 'ಸದಾನಂದಿ ಜಂಗಮ' ಎಂಬ ಹೆಸರಿನಿಂದಲೇ ಪ್ರಕಟಿಸಿದ್ದರು' ಎಂದು ಪ್ರಸ್ತಾಪಿಸಿದ್ದರು.

ಬೇಂದ್ರೆಯವರು 'ಬೆಳಗು' ಕವಿತೆಯ ಭಾವ-ಸಂದರ್ಭ- ಸೂಚನೆಯಲ್ಲಿ 'ಧಾರವಾಡದ ಅತ್ತಿಕೊಳ್ಳದ ಚೆಲುವಿನ ನೋಟದಿಂದ ಪ್ರೇರಿತವಾದದ್ದು. ಸದಾನಂದಿಯಾದ ಜಂಗಮನೊಬ್ಬನು ಹಾಡಿದನೆಂಬಂತೆ ಬರೆದುದು' ಎಂದು ತಿಳಿಸಿದ್ದಾರೆ. 'ಆನಂದ ಕಂದ' ಕಾವ್ಯನಾಮದ ಕವಿ, ಲೇಖಕ ಬೆಟಗೇರಿ ಕೃಷ್ಣಶರ್ಮ (1900-1982) ಅವರು 'ಜಯಂತಿ' ಪತ್ರಿಕೆಯಲ್ಲಿ ಪ್ರಕಟವಾದ 'ಅಂಬಿಕಾತನಯದತ್ತರ ಗರಿ' (1948, ಮೇ) ಲೇಖನದಲ್ಲಿ 'ಸೌಂದರ್ಯ- ಆದಿಭೌತಿಕವೇ ಇರಲಿ. ಆಧ್ಯಾತ್ಮಿಕವೇ ಇರಲಿ- ಇವರ ಭಾವನಾ ಪಟದ ಮೇಲೆ ಸ್ಫುಟವಾಗಿ ಮೂಡುವುದು. ಪ್ರತಿಭೆ ಇವರ ಮಾತುಗಳಲ್ಲಿ ಆ ಸೌಂದರ್ಯವನ್ನು ಅಚ್ಚೊತ್ತಿದಂತೆ ಚಿತ್ರಿಸುವುದು. ಕಂಡ ಸತ್ಯ- ಸೌಂದರ್ಯಗಳನ್ನು ಹೊರಗೆ ತೋರಿಸುವುದಕ್ಕೆ ಬಳಸುವ ಇವರ ಕಲ್ಪನೆ- ಕಣಸುಗಳೂ ಉಪಮೆ- ರೂಪಕಗಳೂ ಊಹೆ- ಉತ್ಪ್ರೇಕ್ಷೆಗಳೂ ತೀರಾ ಹೊಸತನದಿಂದ ಕೂಡಿದುವಾಗಿದ್ದು, ಪಂಡಿತ-ಪಾಮರರನ್ನೂ ಬೆರಗುಗೊಳಿಸುವವು. ಸೌಂದರ್ಯಕ್ಕೆ ಸೋಲುವ ಹೃದಯವಿರುವಂತೆ, ಬದುಕಿಗೆ ಅದನ್ನು ಹೇಗೆ ಸಮನ್ವಯಗೊಳಿಸಿಕೊಳಬೇಕೆಂಬುದನ್ನು ವಿಮರ್ಶಿಸಿ, ತಿಳಿದು ತಿಳುಹುವ ಜಾಗೃತ ಬುದ್ಧಿಯೂ ಇದೆ. ಆದುದರಿಂದಲೇ ಇವರ ಸಾಹಿತ್ಯ ಸೃಷ್ಟಿಯನ್ನು ಆದರ್ಶವಾದಿಗಳೂ ಮೆಚ್ಚುತ್ತಾರೆ; ವಾಸ್ತವಾದಿಗಳೂ ಒಪ್ಪುತ್ತಾರೆ' ಎಂದು ಬರೆದಿದ್ದರು.

'ಪ್ರಾರಂಭದ ಕೆಲವು ಕವನಗಳು- ಭಾವ ನಿರ್ಭರತೆಯಿಂದ ಕೂಡಿದವಾಗಿದ್ದರೂ- ನಿಚ್ಚಳವಾಗಿ ತಿಳಿಯುವ ಕನ್ನಡತನದಿಂದ (ಪ್ರಸಾದ ಗುಣದಿಂದ) ಕೂಡಿಲ್ಲ. ಆದರೆ, 'ಬೆಳಗು' ಎಂಬ ಮೊತ್ತಮೊದಲನೆಯ ವರ್ಣಕ ಕವನ ಮಾತ್ರ ನಡಿಗೆ, ನುಡಿ, ನಿರೂಪಣೆ- ಎಲ್ಲ ದೃಷ್ಟಿಯಿಂದಲೂ ಎಲ್ಲರಿಗೂ ಪ್ರಿಯವಾಗುವಂತಿದೆ. ಸದಾನಂದಿಯಾದ ಜಂಗಮನೊಬ್ಬ ಏಕನಾದದಲ್ಲಿ ದನಿಗೂಡಿಸಿ ಹಾಡಿದ ಹಾಡಿದು. ಒಳಗಿನ ಬೆಳಗನ್ನು ಹೊರಗಿನ ಬೆಳಗಿಗೆ ಹೋಲಿಸಿ ಹೇಳಿದುದಾಗಿದೆ.

ಬೆಳಕಿನ ಹಬ್ಬುಗೆ, ಹೂವಿನ ಅರಳಿಕೆ, ಇಬ್ಬನಿಯ ಅಮೃತದ ಬಿಂದು, ಪಾಡುವ ದುಂಬಿ, ಹಾರಾಡುವ ಹಕ್ಕಿ ಇವುಗಳನ್ನೆಲ್ಲ ಲಾವಣಿಯ ಧಾಟಿಯಲ್ಲಿ ಒಂದೊಂದು ನುಡಿಯಲ್ಲಿ ಬಣ್ಣಿಸುತ್ತ ಕೊನೆಗೆ:

**ಅರಿಯದು ಅಳವು ತಿಳಿಯದು ಮನವು ಕಾಣದೊ**
**ಬಣ್ಣಾ**
**ಕಣ್ಣಿಗೆ- ಕಾಣದೋ ಬಣ್ಣಾ!**
**ಶಾಂತಿರಸವೇ ಪ್ರೀತಿಯಿಂದ ಮೈದೋರಿತಣ್ಣಾ**
**ಇದು ಬರಿ ಬೆಳಗಲ್ಲೋ ಅಣ್ಣಾ!**

ಎಂಬ ಅಪಹ್ನುತ್ಯಲಂಕಾರದ ಮಾತಿನಿಂದ ಬೆಳಗಿನ ಸ್ವರೂಪವನ್ನು ನಿರ್ವಚನ ಮಾಡಿದ್ದಾರೆ' ಎಂದು ವಿವರಿಸಿದ್ದರು.

ಈ 'ಸದಾನಂದಿ ಜಂಗಮ'ನ 'ಬೆಳಗು' ಕವಿತೆ ಪ್ರಕಟವಾಗುವ ಬಹಳಷ್ಟು ಮುಂಚೆಯೇ ಅಂದರೆ 1918ರ

